# ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**-:ವಾರ್ಡ್-42ರ ವಾರ್ಡ್ ಸಮಿತಿ ಸಭೆಯ ನಡವಳಿಗಳು:-**

**ದಿನಾಂಕ: 06.03.2021 ರಂದು ಬೆಳಗ್ಗೆ 10.30 ಗಂಟೆಗೆ ವಾರ್ಡ್ ನಂ.42 ಲಕ್ಷ್ಮೀದೇವಿನಗರ, ವಾರ್ಡ್ ಸಮಿತಿ ಸಭೆಯನ್ನು ವಾರ್ಡ್ ನಂ.42ರ ವಾರ್ಡ್ ಕಛೇರಿಯಲ್ಲಿ ನಡೆಸಲಾಗಿದ್ದು, ಸದರಿ ಸಭೆಯ ಸಭಾ ನಡವಳಿಗಳು**

**ಸಭೆಗೆ ಹಾಜರಿದ್ದ ಅಧಿಕಾರಿಗಳು:**

1. ಡಾ।। ಎಂ. ಜಿ. ಹಳ್ಳಿ ಶಿವರಾಮ್, ಅಧ್ಯಕ್ಷರು ಮತ್ತು ನೋಡಲ್ ಅಧಿಕಾರಿಗಳು
2. ಮಣಿ ಮೇಘಲೈ, ಕಿರಿಯ ಆರೋಗ್ಯ ಪರಿವೀಕ್ಷಕರು,
3. ಎಂ.ನಾಗರಾಜು.ಬೆಸ್ಕಾಂ
4. ನಾರಾಯಣಸ್ವಾಮಿ, ಮೇಲ್ವಿಚಾರಕರು
5. ನಿರ್ಮಲ.ಕಂದಾಯ ವಸೂಲಿಗಾರರು.
6. ದೇವರಾಜ್, ಮೇಲ್ವಿಚಾರಕರು
7. ದಾಕ್ಷಯಣಿ ಲಿಂಕ್ ವರ್ಕರ್
8. ಪ್ರಮೀಳ ಲಿಂಕ್ ವರ್ಕರ್
9. ಹರ್ಷಿತ್ ರಾವ್. ವಾರ್ಡ್ ಮಾರ್ಷಲ್
10. ಶ್ರೀನಿವಾಸ್ ವರ್ಕ್ ಇನ್ಸ್‌ಪೆಕ್ಟರ್, (ಎಹೆಚ್)

ವಾರ್ಡ್-42ರ ವಾರ್ಡ್ ಸಮಿತಿ ಸಭೆಗೆ ಕಾರ್ಯದರ್ಶಿಗಳು ಇಲ್ಲದ ಕಾರಣ ಹಾಜರಿದ್ದ ಎಲ್ಲಾ ಸದಸ್ಯರು ಮತ್ತು ಅಧಿಕಾರಿಗಳನ್ನು ಸ್ವತಹಃ ಅಧ್ಯಕ್ಷರೇ ಸ್ವಾಗತಿಸಿ ವಾರ್ಡ್ ಸಮಿತಿ ಸಭೆಯು ಪ್ರಾರಂಭವಾಯಿತು.

ಈ ಹಿಂದಿನ ಸಭೆಗಳಲ್ಲಿ ಕಾರ್ಯನಿರ್ವಹಿಸುತ್ತಿದ್ದ ಸಹಾಯಕ ಅಭಿಯಂತರರ ಗುತ್ತಿಗೆ ಅವದಿಯು ಮುಗಿದು ಕರ್ತವ್ಯದಿಂದ ಬಿಡುಗಡೆಗೊಳಿಸಿರುವುದರಿಂದ ಸಹಾಯಕ ಅಭಿಯಂತರರು ಇಲ್ಲದೇ ಸಭೆಗಳು ನಡೆಯುತ್ತಿದ್ದು ಬರುವ ದೂರುಗಳನ್ನು ಪರಿಶೀಲಿಸಲು ಮತ್ತು ವಾರ್ಡ್ ಸಮಿತಿ ಸಭೆ ನಡೆಸಲು ಕಾರ್ಯದರ್ಶಿಯ ಅವಶ್ಯಕತೆಯಿದ್ದು, ಸಮಿತಿಗೆ ಕಾರ್ಯದರ್ಶಿ ಅಥವಾ ಸಹಾಯಕ ಅಭಿಯಂತರರ ತುರ್ತು ನೇಮಕಕ್ಕಾಗಿ ಮೇಲಾಧಿಕಾರಿಗಳಿಗೆ ಪತ್ರ ಬರೆಯುವಂತೆ ಸಭೆಯಲ್ಲಿ ತಿರ್ಮಾನಿಸಲಾಯಿತು.

ವಾರ್ಡ್‌ನ ಸದಸ್ಯರಾದ ವಾಸಿಂ ಅಕ್ರಂ ರವರು ಮಾತನಾಡಿ ಲಕ್ಷ್ಮಿದೇವಿನಗರ ಮುಖ್ಯರಸ್ತೆ ರಂಗನಾಥ್ ಬಾರ್ ಪಕ್ಕದಲ್ಲಿ ಖಾಲಿನಿವೇಶನದಲ್ಲಿ ಕಸದ ರಾಶಿಯನ್ನು ಹಾಕುತ್ತಿರುವ ಸಾರ್ವಜನಿಕರಿಗೆ ಬೆಳಗಿನ ಜಾವ 5.00 ಗಂಟೆ ಸಮಯಕ್ಕೆ ಮಾರ್ಷಲ್‌ಗಳು ಕಾದು ಸಾರ್ವಜನಿಕರನ್ನು ಗುರುತಿಸಿ ದಂಡ ವಿಧಿಸಿ ಕಸ ಹಾಕುವುದನ್ನು ತಪ್ಪಿಸಲು ಸಭೆಗೆ ಸೂಚಿಸಿದರು.

ಕ್ರಮ: ಮಾರ್ಷಲ್‌ಗಳು ಹಾಗೂ ಕಿರಿಯ ಆರೋಗ್ಯ ಪರಿವೀಕ್ಷಕರು, ವಾರ್ಡ್ ನಂ.42

Scanned with CamScanner

ವಾರ್ಡ್ ಸದಸ್ಯರಾದ ಮಧು ಹಾಗೂ ಶಶಿಕುಮಾರ್ ರವರು ಮಾತನಾಡಿ ಸಂಜಯ ಗಾಂಧಿನಗರದಲ್ಲಿ 450 ರಿಂದ 500 ರವರೆಗು ಮನೆಗಳಿದ್ದು, ಎಲ್ಲಾ ಕುಟುಂಬದವರು ಜೀವನೋಪಯಕ್ಕಾಗಿ ಕೂಲಿ ಮಾಡಲು ಮುಂಜಾನೆ 8.30 ಕ್ಕೆ ಹೊರ ಹೋಗುತ್ತಾರೆ. ಆದರೆ ಕಸದ ಗಾಡಿಯು 9.00 ಗಂಟೆಗೆ ಬಂದರೆ ಕಸ ಹಾಕಲು ಸಾಧ್ಯವಾಗುವುದಿಲ್ಲಾದ್ದರಿಂದ ಕಸದ ಡ್ರಮ್ ಗಳನ್ನು ಒಣಕಸ ಹಾಗೂ ಹಸಿಕಸಕ್ಕೆ ಇಡಲು ಸೂಚಿಸುವಂತೆ ಕೋರಿದರು. ಕ್ರಮ ಕೈಗೊಳ್ಳುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು (ಘನತ್ಯಾಜ್ಯ ವಿಭಾಗ)ವಾರ್ಡ್ ನಂ.42**

ವಾರ್ಡ್ ಸದಸ್ಯರಾದ ಶಶಿಕುಮಾರ್ ರವರು ಮಾತನಾಡಿ ಲಕ್ಷ್ಮಿದೇವಿನಗರ ಬಸ್ ನಿಲ್ದಾಣದಲ್ಲಿ ಕಲುಷಿತ ನೀರು ಹರಿಯುತ್ತಿರುವ ಬಗ್ಗೆ ಸಭೆಯ ಗಮನಕ್ಕೆ ತರಲಾಗಿ ಕೂಡಲೇ ಕ್ರಮಕೈಗೊಳ್ಳುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು ಗೊರಗುಂಟೆಪಾಳ್ಯ ಉಪವಿಭಾಗ**

ವಾರ್ಡ್ ಸದಸ್ಯರಾದ ಕವಿತಾ ರವರು ಮಾತನಾಡಿ IR Polly Technic ರಸ್ತೆಯಲ್ಲಿ ಬೀದಿ ದೀಪಗಳು ಇಲ್ಲದಿರುವ ಬಗ್ಗೆ ದೂರು ನೀಡಿದರು ತಕ್ಷಣವೇ ವಾರ್ಡ್ ನಂ.41 ಕ್ಕೆ ಸೇರಿರುವ ಬೀದಿ ದೀಪಗಳ ಅಧಿಕಾರಿಗಳಿಗೆ ಸಂಪರ್ಕಿಸಿ ಸರಿಪಡಿಸಲು ಅಧ್ಯಕ್ಷರು ಸೂಚಿಸಿದರು.

**ಕ್ರಮ: ಬೀದಿ ದೀಪಗಳ ಉಸ್ತುವಾರಿಗಳು, ಆರ್‌ಆರ್‌ನಗರ ವಲಯ, ಬಿಬಿಎಂಪಿ**

ಆರೋಗ್ಯ ಇಲಾಖೆಯ ಡಾ॥ ರೇಣುಕ ಪ್ರಸಾದ್ ರವರು ಮಾತನಾಡಿ ಸೋಮವಾರದಿಂದ 60 ವರ್ಷ ಮೇಲ್ಪಟ್ಟ ಹಿರಿಯ ನಾಗರೀಕರಿಗೆ ಕೋವಿಡ್-19 ವ್ಯಾಕ್ಸ್ ನೇಷನ್ ಹಾಕುವ ಸಲುವಾಗಿ ಸಾರ್ವಜನಿಕರು ಸಾಲುಗಟ್ಟಿ ನಿಲ್ಲಲು ಬಿಸಿಲು ಇರುವುದರಿಂದ ಶಾಮಿಯಾನ ಹಾಕಿಸಿಕೊಡಲು ಕೋರಿದರು. ಸೂಕ್ತ ಕ್ರಮಕೈಗೊಳ್ಳುವಂತೆ ಅಧ್ಯಕ್ಷರು ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚಿಸಿದರು.

**ಕ್ರಮ: ಸಹಾಯಕ ಕಾರ್ಯಪಾಲಕ ಅಭಿಯಂತರರು ಗೊರಗುಂಟೆಪಾಳ್ಯ ಉಪವಿಭಾಗ**

ಆರಕ್ಷಕ ಇಲಾಖೆಯವರು ಸಭೆಗೆ ಹಾಜರಾಗದಿರುವ ಬಗ್ಗೆ ಸಂಬಂಧಿಸಿದ ಠಾಣೆಯ ಅಧಿಕಾರಿಗಳಿಗೆ ತಿಳಿಸುವಂತೆ ಅಧ್ಯಕ್ಷರು ಅಧಿಕಾರಿಗಳಿಗೆ ಸೂಚಿಸಿದರು.

ಮೇಲ್ಕಂಡ ಸಮಸ್ಯೆಗಳ ಬಗ್ಗೆ ಸುಧೀರ್ಘವಾಗಿ ಚರ್ಚಿಸಿ, ಕಾರ್ಯದರ್ಶಿಯವರ ವಂದನಾರ್ಪಣೆಯೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತು.

(ಎನ್.ಜಿ.ಉಮೇಶ್.)
ಪ್ರಭಾರ ಸಹಾಯಕ ಕಾರ್ಯಪಾಲಕ
ಅಭಿಯಂತರರು ಹಾಗೂ
ಸದಸ್ಯ ಕಾರ್ಯದರ್ಶಿ

(ಡಾ॥ ಎಂ. ಜಿ. ಹಳ್ಳಿ ಶಿವರಾಮ್)
ವಾರ್ಡ್ ನೋಡಲ್ ಅಧಿಕಾರಿ
ವಾರ್ಡ್ ಸಂಖ್ಯೆ:42

Scanned with CamScanner